

ಇದು ನಾನು ಮಾಡಬೇಕಾದ ಕೆಲಸ ಅನ್ನಿಸುತ್ತಿತ್ತು. ಹಣದ ಮನೆ ಹಾಳಾಗಲಿ, ಅವರು ಸಂತೋಷವಾಗಿದ್ದರೆ ಸಾಕು ಎಂದು ಸಾವಿರ ಬಾರಿ ಅಂದುಕೊಂಡಿದ್ದಾನೆ. ಆದರೂ ಅಪ್ಪ ಬದಲಾಗಿಲ್ಲ. ಅಪ್ಪನಿಗೆ ಎಂದೂ ಎದುರು ಹೇಳದ ಅವ್ವ, ಒಳಗೊಳಗೆ ಬೆಟ್ಟದಷ್ಟು ಪ್ರೀತಿಯಿದ್ದರೂ, ಕಳೆದ ಹದಿನಾರು ವರ್ಷದಿಂದ ಹಟ ಸಾಧಿಸುತ್ತಿದ್ದಾರೆ ಅನ್ನಿಸಿತು.

ರಾಜು ಅರಸೀಕೆರೆ ಸಮೀಪದ ಚನ್ನೇನಹಳ್ಳಿಯವನು. ಪಿಯುಸಿಯಲ್ಲಿ ಮೂರು ವರ್ಷ ಡುಮ್ಕಿ. ಅಪ್ಪನೊಂದಿಗೆ ಹೊಲ ತೋಟಗಳಲ್ಲಿ ಕೆಲಸ ಮಾಡುತ್ತಿದ್ದರೂ, ಜೊತೆಗಾರರ ಸಹವಾಸ ಅವನ ದಾರಿ ತಪ್ಪಿಸಿತ್ತು. ಮಗ ಕುಡಿಯುವುದನ್ನು ಕಂಡ ಅಪ್ಪ ರೌದ್ರಾವತಾರ ತಳೆದಿದ್ದ. ಊರಿನ ಚಿಕ್ಕಮ್ಮನ ಗುಡಿಯ ಪೂಜಾರಿಕೆ ವಂಶಪಾರಂಪರಿಕವಾಗಿ ಬಂದಿತ್ತು. ಅಪ್ಪನ ಒಡಹುಟ್ಟಿದವರು ಇನ್ನೂ ಮೂವರಿದ್ದರಿಂದ, ವರ್ಷದಲ್ಲಿ ಮೂರು ತಿಂಗಳಷ್ಟೇ ಅಪ್ಪ ಪೂಜೆ ಮಾಡುತ್ತಿದ್ದ. ವರ್ಷಕ್ಕೊಮ್ಮೆ ಬರುವ ಜಾತ್ರೆಯಲ್ಲಿ ನಾಲ್ವರೂ ಪೂಜೆ ಮಾಡುತ್ತಿದ್ದರು. ತಾನು ಪೂಜೆ ಮಾಡುತ್ತಿದ್ದ ದೇವರಿಗೆ ಮದ್ಯಮಾಂಸ ನೈವೇದ್ಯ ಮಾಡಿ, ತಾನೂ ಕುಡಿಯುತ್ತಿದ್ದ ಅಪ್ಪನಿಗೆ, ಮಗ ಕುಡಿದಿದ್ದು ದೊಡ್ಡ ಅಪರಾಧವಾಗಿ ಕಂಡಿದ್ದೇಕೆಂದು ರಾಜುವಿಗೆ ಅರ್ಥವಾಗಿರಲಿಲ್ಲ. ಮನೆಯಲ್ಲಿ ದಿನಾ ಪಿರಿಪಿರಿ ತಪ್ಪುತ್ತಿರಲಿಲ್ಲ. ಹೀಗೆ ದಿನ ಕಳೆಯುತ್ತಿದ್ದ ರಾಜು ಕಣ್ಣಿಗೆ, ಬಂಧುಗಳ ಮನೆಯಲ್ಲಿದ್ದು, ಡಿ.ಎಡ್. ಮುಗಿಸಿಕೊಂಡು ಆಗಷ್ಟೇ ಬಂದಿದ್ದ ಕೆಳಗೇರಿಯ ಉಮಾ ಕಣ್ಣಿಗೆ ಬಿದ್ದಳು. ಮೊದಲ ದಿನದಿಂದಲೇ ಅವಳ ಬಗ್ಗೆ ತನ್ನೊಳಗೇ ಒಂದು ಬೆಚ್ಚನೆಯ ಗೂಡು ಕಟ್ಟಲಾರಂಭಿಸಿದ ರಾಜು, ಅದನ್ನು ಅವಳ ಮುಂದೆ ವ್ಯಕ್ತಪಡಿಸಲಾರದೆ, ವರ್ಷವಿಡೀ ರಾತ್ರಿ ನಿದ್ದೆಯಿಲ್ಲದೆ, ಮನೆಯ ಜಂತಿ ಎಣಿಸಿದ್ದ! ಅಪ್ಪನ ಕಿರಿಕಿರಿಯ ನಡುವೆ ತಾನಿನ್ನು ಬದುಕಿರುವುದು ಉಮಾಳಿಗೋಸ್ಕರವೇ ಇರಬೇಕು ಅನ್ನಿಸುತ್ತಿತ್ತು ಅವನಿಗೆ! ಆ ವರ್ಷದ ಜಾತ್ರೆಯ ದಿನ ಉಮಾಳೊಡನೆ ಮಾತನಾಡುವ ಅವಕಾಶ ದೊರೆಯಿತು. ಅಷ್ಟೊತ್ತಿಗಾಗಲೇ ಅವಳಿಗೆ ಐದಾರು ಮದುವೆ ಅವಕಾಶಗಳು ಒದಗಿ ಬಂದಿದ್ದು, ಅವಳ ಮುಂಗೈಯಲ್ಲಿದ್ದ ಕಾಸಗಲದ ತೊನ್ನಿನ ಕಾರಣದಿಂದ ಮುರಿದು ಬಿದ್ದಿದ್ದವು. ಅವಳೂ ಹೊರಗೆಲ್ಲಾದರೂ ಹೋಗಿ ಕೆಲಸಕ್ಕೆ ಸೇರುವ ಕನಸು ಕಾಣುತ್ತಿದ್ದಳು. ಅಪ್ಪ ಮಗಳಿಗೆ ಇಷ್ಟು ಓದಿಸಿದ್ದರಿಂದಲೇ ಗಂಡುಗಳು ಸಿಗುತ್ತಿಲ್ಲ ಎಂದು ಸಿಡುಕುತ್ತಿದ್ದ. ಅಂತಹ ಹೊತ್ತಿನಲ್ಲೇ ಜಾತ್ರೆಯಲ್ಲಿ ರಾಜುವಿನ ಪರಿಚಯವಾಗಿದ್ದು. ಅವಳೊಂದಿಗಿನ ಒಡನಾಟದಲ್ಲಿ ರಾಜು ಎಷ್ಟು ವಿನೀತನಾಗಿದ್ದನೆಂದರೆ, ಆತನಿಗೆ ಕುಡಿಯಬೇಕೆಂದೇ ಅನ್ನಿಸುತ್ತಿರಲಿಲ್ಲ. ಆದರೆ, ಉಮಾಳ ಕೇರಿಯವನೇ ಆಗಿದ್ದ ರಾಜುವಿನ ಸ್ನೇಹಿತನೊಬ್ಬನಿಗೆ, ಅವರ ಸಂಬಂಧದ ಸುಳಿವು ಹತ್ತಿಬಿಟ್ಟಿತ್ತು. ಉಮಾಳ ಗುಪ್ತಪ್ರೇಮಿಯಾಗಿದ್ದ ಆತನಿಗೆ, ಅವಳು ರಾಜುವಿಗೆ ಹತ್ತಿರವಾದದ್ದು, ಅವಳಿಗಾಗಿ ರಾಜು ಕುಡಿತ ಬಿಟ್ಟಿದ್ದನ್ನು ಸಹಿಸಿಕೊಳ್ಳಲಾಗಲಿಲ್ಲ. ಒಂದು ದಿನ ಚೆನ್ನಾಗಿ ಕುಡಿದು, ಊರೊಳಗೆ ಡಂಗೂರ ಸಾರಿಬಿಟ್ಟಿದ್ದ: ರಾಜು ಉಮಾ ಕಳ್ಳಾಟ ಆಡುತ್ತಿದ್ದಾರೆ ಎಂದು. ಮಾರನೆಯ ದಿನವೇ ಕೆಂಡಾಮಂಡಲನಾಗಿದ್ದ ಅಪ್ಪ, ತನ್ನ ಅಬ್ಬರಕ್ಕೆ, ಮಗ ಹಿಂದಿನಂತೆ ಹೆದರಿ ಮುದುರಿಕೊಳ್ಳುತ್ತಾನೆ ಎಂದುಕೊಂಡಿದ್ದ. ಮಗನಿಗೆ ಬುದ್ಧಿ ಹೇಳಿಸಲು ಊರಿನಿಂದ ಅಕ್ಕ ಬಾವನನ್ನು ಕರೆಸಿಕೊಂಡಿದ್ದ. ಅಪ್ಪನ ಕೋಪಕ್ಕೆ ರಾಜುವಿನ ಮನಸ್ಸು ಒಗ್ಗಿಹೋಗಿತ್ತು. ಜೊತೆಗೆ ಉಮಾಳ ಆಕರ್ಷಣೆ ಬೇರೆ. ಅಪ್ಪನಿಗೆ ತಿರುಗಿ ಹೇಳಿಯೇ ಬಿಟ್ಟ, ನಾನು ಅವಳನ್ನೇ ಮದುವೆಯಾಗುತ್ತೇನೆ ಎಂದು! ಮನೆಯಲ್ಲಿ, ದೊಡ್ಡ ಬಾಂಬ್ ಬಿದ್ದ ಮೇಲಿನ ನಿಶ್ಯಬ್ದ! ಅವ್ವ, ಆ ನಿಶ್ಯಬ್ದವನ್ನೂ ಮೀರಿ ಬಿಕ್ಕತೊಡಗಿದಾಗ, ಅಕ್ಕ ಸಮಾಧಾನಿಸತೊಡಗಿದಳು. ನಂತರ ಶುರುವಾಗಿತ್ತು ಅಪ್ಪನ ದೈತ್ಯಕುಣಿತ. ಉಮಾ ಅವರದಕ್ಕಿಂತ ಕೀಳು ಜಾತಿಯವಳು ಎಂಬುದು, ಅಪ್ಪನ ಮಾತುಗಳ ನಡುವೆ ಪ್ರಕಟವಾಗಿತ್ತು. ಪೂಜೆ ಮಾಡುವ ದೇವರಿಗೆ ಮುಟ್ಟಚಟ್ಟು ಆಗುತ್ತದೆ ಎಂಬುದು ಅಪ್ಪನ ಕೋಪಕ್ಕೆ ಮುಖ್ಯ ಕಾರಣವಾಗಿತ್ತು. ವಿಚಿತ್ರವೆಂಬಂತೆ, ರಾಜುವಿನ ಮನಸ್ಸಿನಲ್ಲಿ ಉಮಾಳನ್ನೆ ಮದುವೆಯಾಗುವ ನಿರ್ಧಾರ ಮಾತ್ರ ಬಲವಾಗುತ್ತಲೇ ಹೋಗುತ್ತಿತ್ತು. ಅಷ್ಟಕ್ಕೂ ಅವನಿನ್ನೂ ಉಮಾಳಲ್ಲಿ ಮದುವೆಯ ಪ್ರಸ್ತಾಪವನ್ನೇ ಎತ್ತಿರಲಿಲ್ಲ! ಇಂದೇ ಉಮಾ ಜೊತೆ ಮಾತನಾಡಬೇಕು; ಮದುವೆಗೆ ಒಪ್ಪಿಸಬೇಕು. ಮನೆಯವರು ಒಪ್ಪದಿದ್ದರೆ, ಓಡಿ